**ದಿನಾಂಕಃ 14.10.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀಮತಿ. ಎ ಬಿ ಎಸ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ ಮತ್ತು ವಿಷಯ ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ದಿಃ24.03.2014 ರಂದು ನನ್ನ ಅಣ್ಣ ತ್ಯಾಗರಾಜನ್ ಎಸ್ ರವರು ಮಾಡಿದ ವಿಲ್ ಗೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಈಗ ನಾನು ನೋಡುತ್ತಿರುವ ನಿ.ಪಿ 1 ವಿಲ್ ಗೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದು , ತ್ಯಾಗರಾಜನ್ ಎಸ್ ರವರು ನನ್ನ ಸಮಕ್ಷಮ ಸಹ ನಿ.ಪಿ 1 ಕ್ಕೆ ಸಹಿ ಮಾಡಿದ್ದಾರೆ. ನಿ.ಪಿ 1 ರಲ್ಲಿನ ಸಾಕ್ಷಿ ಗುರುತಿಸಿದ ಅವರ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು. ತ್ಯಾಗರಾಜನ್ ಎಸ್ರವರ ಸಹಿ ನನಗೆ ಗೊತ್ತಿದೆ. ನಾನು ಅವರ ಸಹಿಯನ್ನು ಗುರುತಿಸುತ್ತೇನೆ. ನಿಪಿ. 1 ರ ಪ್ರತಿ ಪುಟದಲ್ಲಿ ಅವರ ಸಹಿ ಇದೆ. ಕೊನೆಯ ಪುಟದಲ್ಲಿಯ ಸಹಿಯನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು. ನಿ.ಪಿ 1 ಕ್ಕೆ ನನ್ನ ತಂಗಿಯರಾದ ಸುಧಾ ಮತ್ತು ಜಯಾ ರಾಮಕೃಷ್ಣನ್ ರವರು ಸಹ ಸಹಿ ಮಾಡಿದ್ದಾರೆ. ಅವರ ಸಹಿಯನ್ನು ನಾನು ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಅವರ ಸಹಿಗಳನ್ನು ನಿಪಿ. 1(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಎದುರದಾರರು ಯಾರು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

14.10.2024

(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.